ಅಧ್ಯಕ್ಷರು.—ಯಾವುದನ್ನೂ ರೆಕಾರ್ಡ್ ಮಾಡಬೇಡಿ.

Sri H. M. CHANNABASAPPA.—The timings have not been mentioned in the report of the Divisional Commissioner.

ಶ್ರೀ ಕೋಣಂದೂರು ಲಿಂಗಪ್ಪ.—ಈ ಸರ್ಕಾರದವರು ಇಷ್ಟೊಂದು ಬಹಿರಂಗವಾಗಿ ಸತ್ಯಕ್ಕೆ ದೂರವಾದ ಹೇಳಿಕೆಯನ್ನು ಸಾರ್ವಜನಿಕರ ಮೇಲೆ ಮತ್ತು ಕನ್ನಡ ಜಿಲ್ಲಾವಳಿಗಾರರ ಮೇಲೆ ಹೇಳುತ್ತಿದ್ದಾರೆ. ಆದಕಾರಣ ಈ ಸರ್ಕಾರದ ನೀತಿಯನ್ನು ಮತ್ತು ದಬ್ಬಾಳಿಕೆಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

Sri H. M. CHANNABASAPPA.—Another point I would like to submit. Nothing prevented the accused, to complain if there is any such thing. When the Police people brought them before the Magistrate. The Divisional Commissioner has clearly stated what has been exactly written by the Magistrate. The accused has not made any complaint about any police people. For the information of the House, I would read the relevant portion from the report of the Divisional Commissioner.

> "In fact the Magistrate before whom the arrested persons were produced, has recorded that the accused allege no ill-treatment from the Police."

This is what the Magistrate has written.

ಶ್ರೀ ಕೆ.ಎಚ್. ಹನುಮೇಗೌಡ.—ಈ ರಾಜ್ಯದ ವಿದ್ಯಾರ್ಥಿಗಳ ಮೇಲೆ ಪದೇ ಪದೇ ಪೋಲೀಸಿನವರ ದೌರ್ಜನ್ಯ ನಡೆಯುತ್ತಿದೆ; ಆದರೆ ಸರ್ಕಾರದವರು ಅದನ್ನು ಅಲ್ಲಗಳೆಯುತ್ತಿದ್ದಾರೆ ಈ ಸರ್ಕಾರದ ನೀತಿಯನ್ನು ವಿರೋಧಿಸಿ ನಾವೆಲ್ಲರೂ ಸಭಾತ್ಯಾಗ ಮಾಡುತ್ತೇವೆ.

(ಮಾನ್ಯ ವಿರೋಧಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಬಡ್ಜೆಟ್ ಮೇಲೆ ಮಾತನಾಡುವವರ ಪಟ್ಟಿಯನ್ನು ನನಗೆ ಕಳಿಸಿಕೊಟ್ಟಿದ್ದಾರೆ. ಅದರಲ್ಲಿ 12 ಜನರ ಹೆಸರುಗಳು ಇವೆ; ಆದಕಾರಣ ಮಾನ್ಯ ಶ್ರೀರನಾಳ ಚಂದ್ರಶೇಖರ್ ಅವರು ತಮ್ಮ ಭಾಷಣವನ್ನು 5 ನಿಮಿಷದಲ್ಲಿ ಮುಗಿಸಬೇಕು; ಅವರು ಆಗಲೇ ನೆನ್ನೆದಿವಸ 19 ನಿಮಿಷ ಮಾತನಾಡಿದ್ದಾರೆ.

BUDGET ESTIMATES FOR 1974-75
General Discussion

(Debate Continued)

† ಶ್ರೀ ಎಸ್. ಎಂ. ಶ್ರೀರನಾಳ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ನೆನ್ನೆದಿವಸ ನಾನು ಮಾತನಾಡುವಾಗ ಮಾನ್ಯ ವಿರೋಧಪಕ್ಷದ ನಾಯಕರು ಬರಗಾಲದ ಪ್ರದೇಶಗಳಲ್ಲಿ ನಡೆದಿರುವ ಕಾಮಗಾರಿಗಳ ಬಗ್ಗೆ ತನಿಖೆ ಮಾಡಲು ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಬೇಕೆಂದು ಎತ್ತಿರತಕ್ಕಂಥ ಅಂಶದ ಬಗ್ಗೆ ನಾನು ಗಾಂಪರೊಡೆಯರ ಕಥೆಯನ್ನು ಉದಾಹರಣೆ ಕೊಟ್ಟು ಹೇಳಿದೆ. ಆ ರೀತಿ ಏನಾದರೂ ವಿಚಾರಣಾ ಸಮಿತಿಯನ್ನು ಮಾಡಿದರೆ, ವಿಚಾರಣೆ ಎಲ್ಲೆಲ್ಲಿಯೂ ನಡೆದು ಕೊನೆಗೆ ಅದು ನಮ್ಮ ತಲೆಗೆ ಬರಬಹುದು ಎಂಬ ಕಾರಣದಿಂದ ನಾನು ಗಾಂಪರೊಡೆಯರ ಕಥೆಯನ್ನು ಹೇಳಿ ವಿರೋಧಪಕ್ಷದ ನಾಯಕರನ್ನು ಎಚ್ಚರಿಸಿದೆ. ಕನ್ನಡದಲ್ಲಿ